ಸಾಕ್ಷಿಯನ್ನು ದಿನಾಂಕ: 06-01-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನಾಗಪ್ಪ ಸಲ್ಲಿಸಿದ ಫಾರಂ-7 ನ್ನು ನಾನು ಪಡೆದಿದ್ದು ಇರುವುದಿಲ್ಲ. ಸಾಕ್ಷಿ ಮುಂದುರಿದು ಅದು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಫಾರಂ 7 ನ್ನು ನೋಡದೇ ಇರುವ ಕಾರಣ ನಾಗಪ್ಪ ಸದ್ರಿ ಅರ್ಜಿಯನ್ನು ಕುಟುಂಬದ ನಾತೆಯಿಂದ ತುಂಬಿದ್ದನಾ ಅಥವಾ ವೈಯ್ಯಕ್ತಿಕ ನಾತೆಯಿಂದ ತುಂಬಿದ್ದನಾ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು ಭೂ ನ್ಯಾಯ ಮಂಡಳಿಯ ಆದೇಶವನ್ನು ನೋಡಿದ್ದೇನೆ. ಪಟ್ಟಾದಲ್ಲಿ ಅಕುಮೆ ನಾತೆಯಿಂದ ಮಂಜೂರಿಯಾಗಿದ್ದು ಇರುವುದಿಲ್ಲ ಅದು ಅವನ ವೈಯಕ್ತಿಕವಾಗಿ ಮಂಜೂರಿಯಾಗಿದೆ ಎಂದರೆ ಸರಿ. ದಾವಾಸ್ತಿಗಳು ನಾಗಪ್ಪನ ಸಂತಾರ್ಜಿತ ಆಸ್ತಿಯಾಗಿದ್ದು ಅದು ಕುಟುಂಬದ ಆಸ್ತಿಯಲ್ಲ ಎಂದರೆ ಸರಿಯಲ್ಲ. ನಾಗಪ್ಪನ ಆಸ್ತಿಯಲ್ಲಿ ಹಕ್ಕನ್ನು ಪಡಯಬೇಕು ಎಂದು ಸದ್ರಿ ಆಸ್ತಿಯನ್ನು ಬಾಲ ಯಾನೆ ಗಣಪಯ್ಯ ಇವರಿಗೆ ಸೇರಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1963 ನೇ ಇಸ್ವಿಯಲ್ಲಿ ನಾಗಪ್ಪನಿಗೆ ಸುಮಾರು 60-70 ವರ್ಷ ವಯಸ್ಸಾಗಿರಬಹುದು. ಅವರಿಗೆ 1962 ರ ಅಕ್ಕ ಪಕ್ಕದಲ್ಲಿ ಪಾರ್ಶ್ವವಾಯು ಆಗಿತ್ತು. ಆ ಬಗ್ಗೆ ನಮ್ಮ ಹತ್ತಿರ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಅವರಿಗೆ ಯಾರು ಚಿಕಿತ್ಸೆ ಕೊಡಿಸಿದ್ದಾರೆ ಮತ್ತು ಎಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ ಎಂದು ವೈಯಕ್ತಿಕವಾಗಿ ಗೊತ್ತಿಲ್ಲ. ಅವರಿಗೆ ಹೃದಯ ಸಂಬಂಧಿ ಖಾಯಿಲೆ ಕೂಡ ಇತ್ತು. ಅವರಿಗೆ ಖಾಯಿಲೆ ಇತ್ತು ಎನ್ನುವ ಕುರಿತು ಯಾವುದೇ ದಾಖಲಾತಿ ಇಲ್ಲ. ನಾಗಪ್ಪನಿಗೆ ಯಾವುದೇ ಖಾಯಿಲೆ ಇರಲಿಲ್ಲ ಅವರು ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. ಅವರು ಮೃತಪಡುವವರೆಗೂ ಅವರಿಗೆ ಹಿತ ಮತ್ತು ಅಹಿತ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿಯಲ್ಲ. 1963 ನೇ ಇಸ್ವಿಯಲ್ಲಿ ದಾವಾಸ್ತಿಗಳನ್ನು 1 ರಿಂದ 4 ನೇ ಪ್ರತಿವಾದಿಯರಿಗೆ ದಾನಪತ್ರ ಮತ್ತು ವಿಲ್ ನಾಮೆ ಮೂಲಕ ಹಸ್ತಾಂತರ ಮಾಡಿದ್ದರು ಎಂದರೆ ಅವರು ಕೊಟ್ಟ ದಾಖಲೆ ಎಂದು ನುಡಿಯುತ್ತಾರೆ. ದಾವಾಸ್ತಿಗಳು ಸ್ವತಂತ್ರ ಆಸ್ತಿಯಾದ ಕಾರಣ ಅವರು ಮಾಡಿದ ಪರಭಾರೆಯನ್ನು ಪ್ರಶ್ನಿಸುವ ಅಧಿಕಾರ ನಮಗೆ ಇಲ್ಲ ಎಂದರೆ ಸಾಕ್ಷಿ ಅವು ಪಿತ್ರಾರ್ಜಿತ ಆಸ್ತಿ ಎಂದು ನುಡಿಯತ್ತಾರೆ. 1963 ನೇ ಇಸ್ವಿಯಿಂದ ಈ ರೀತಿ ದಾವಾಸ್ತಿಗಳು ಹಸ್ತಾಂತರ ಆದ ವಿಚಾರ ನನಗೆ ಮತ್ತು ನನ್ನ ತಾಯಿ ಗೊತ್ತಿದ್ದರೂ ಸಹ ನಾವು ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಮಗೆ 2018 ರಲ್ಲಿ ಈ ಬಗ್ಗೆ ಮಾಹಿತಿ ಸಿಕ್ಕಿರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಸಂಪೂರ್ಣ ಕಬ್ಜೆಯನ್ನು 1 ರಿಂದ 4 ನೇ ಪ್ರತಿವಾದಿಯೆ ಹೊಂದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಬಗ್ಗೆ ಹಿಸ್ಸೆ ಪೈರಿಯನ್ನು ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ದಾವಾಸ್ತಿಯ ಸಾಗುವಳಿಯನ್ನು ಮಾಡಿದ್ದು ಇರುವುದಿಲ್ಲ ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಯರಿಂದ ಪಡೆದ ಪೈರಿನ ಕುರಿತು ಲಿಖಿತ ದಾಖಲೆಗಳನ್ನು ಬರೆದಿದ್ದು ಇರುವುದಿಲ್ಲ. ಆ ರೀತಿ ನನಗೆ ಮಾಹಿತಿ ಕೊಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಈಗ ದಾವಾ ಸ್ಥಳದ ಅಭಿವೃದ್ದಿ ಆದ ಕಾರಣ ಅವುಗಳನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾಸ್ತಿಗಳನ್ನು ಪಟಾಯಿಸುವ ಸಲುವಾಗಿ ಈ ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/–
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.